ಅ) 1994-95ನೇ ಸಾಲಿನ ಕೊನೆಗೆ ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ಗುತ್ತಿಗೆದಾರರಿಗೆ ರಸ್ತೆಗಳ ಬಾಬ್ತು ನೀಡಬೇಕಾಗಿದ್ದಂತಹ ಬಿಲ್ಲುಗಳ ಮೊತ್ತ 136.02 ಲಕ್ಷ ರೂ.ಗಳು ಇದರಲ್ಲಿ ದಿನಾಂಕ 1.4.1995ರಿಂದ 31.7.95 ರವರೆಗೆ 65.61 ಲಕ್ಷ ರೂ.ಗಳ ಬಿಲ್ಲುಗಳನ್ನು ಪಾವತಿ ಮಾಡಿದ್ದು, ದಿನಾಂಕ 1.8.1995ಕ್ಕೆ ಬಾಕಿ ಇರುವ ಬಾಬ್ತು 68.41 ಲಕ್ಷ ರೂ.ಗಳು ಎಂದು ಜಿಲ್ಲಾ ಪಂಚಾಯತ್ ಪತಿಯಿಂದ ತಿಳಿಸಿರುತ್ತಾರೆ.

ಆ) ಸದರಿ ವಿಷಯದಲ್ಲಿ ಸರ್ಕಾರದ ಬಳಿ ಯಾವುದೇ ಮಾಹಿತಿ ಇರುವುದಿಲ್ಲ.

ಇ) ರಸ್ತೆ ಕೆಲಸ ಮಾಡದೇ ಹಣ ಪಡೆದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ನಿಯಮಗಳ ರೀತ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕಿರುಗಾವಲು ಕ್ಷೇತ್ರದಲ್ಲಿ ನ್ಯಾಯಬೆಲೆ ಅಂಗಡಿಗಳು

1920 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಡ್ಯ ಜಿಲ್ಲೆ ಕಿರುಗಾವಲು ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?*

ಆ) *ಹಾಗಿದ್ದಲ್ಲಿ, ಇವುಗಳ ಪೈಕಿ ದೂರುಗಳು ಬಂದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳೇನು?*

ಇ) *ಕಿರುಗಾವಲು ಹೋಬಳಿ, ಆಲದ ಹಳ್ಳಿ ನ್ಯಾಯಬೆಲೆ ಅಂಗಡಿಯ ಪ್ರಕರಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 55

ಆ) 4. ಈ ಅಂಗಡಿಗಳ ಪ್ರಾಧಿಕಾರವನ್ನು ಅಮಾನತ್ತು ಪಡಿಸಲಾಗಿದೆ.

ಇ) ಕಿರುಗಾವಲು ಹೋಬಳಿ ಆಲದ ನ್ಯಾಯಬೆಲೆ ಅಂಗಡಿಯ ಪ್ರಾಧಿಕಾರವನ್ನು ಅಮಾನತ್ತು ಪಡಿಸಿದೆ. ಈ ಬಗ್ಗೆ ನ್ಯಾಯಬೆಲೆ ಅಂಗಡಿ ಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ನಂ. 27903 :95 ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ಉಚ್ಚ ನ್ಯಾಯಾಲಯ ಆದೇಶವನ್ನು ಕಾಯಲಾಗಿದೆ.

ಕರ್ನಾಟಕ ಹಾಲು ಮಹಾ ಮಂಡಲಿಗೆ ಸಹಾಯಧನ

1906 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ಹಾಲು ಮಹಾ ಮಂಡಳಿಗೆ ರೂ. 5.50 ಕೋಟಿಗಳನ್ನು ಸಹಾಯಧನ ರೂಪದಲ್ಲಿ ಮಂಜೂರು ಮಾಡಲಾಗಿದೆಯೇ?*

ಆ) *ರಾಜ್ಯ ಸರ್ಕಾರದಿಂದ ಕರ್ನಾಟಕ ಹಾಲು ಮಹಾ ಮಂಡಳಿಗೆ ಬಿಡುಗಡೆಯಾಗಬೇಕಾಗಿರುವ ಬಾಕಿ ಹಣ ಎಷ್ಟು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1993-94ನೇ ಸಾಲಿನಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಗೆ ಸರ್ಕಾರವು ಈ ಕೆಳಕಾಣಿಸಿದಂತೆ ಹಣ ಬಿಡುಗಡೆ ಮಾಡಿದೆ.

		ಯೋಜನೆ ರೂ. ಲಕ್ಷಗಳಲ್ಲಿ	ಯೋಜನೇತರ ರೂ. ಲಕ್ಷಗಳಲ್ಲಿ
1)	ಸಹಾಯಾನುಧಾನ ರೂಪದಲ್ಲಿ	500-00	-
2)	ಪೈರು ಬೆಳೆ ನಷ್ಟ ಭರಿಸಲು ಸಹಾಯಧನ ರೂಪದಲ್ಲಿ	-	325-00
3)	ಬ್ರಿಡ್ಜ್ ಲೋನ್ ರೂಪದಲ್ಲಿ	150-00	-
	ಒಟ್ಟು	650-00	325-00

ಆ) 1. 1995-96ನೇ ಸಾಲಿನಲ್ಲಿ ಯೋಜನೆ ಸಹಾಯಾನುಧಾನವಾಗಿ ರೂ. 218.00 ಲಕ್ಷ

2. ಮಕ್ಕಳ ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ 677.68 ಲಕ್ಷ

ಒಟ್ಟು ರೂ. 895.68

ಹಾಲು ಒಕ್ಕೂಟಗಳ ಬಗ್ಗೆ

1913 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಲ್ಲಿ ಹಾಲು ಒಕ್ಕೂಟಗಳನ್ನು ಹಾಲು ಮತ್ತು ಹಾಲು ಉತ್ಪನ್ನಗಳನ್ನು ಮಾಡಲು ಖಾಸಗಿಯವರಿಗೆ ಕೊಡುವ ಆಲೋಚನೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆಯೇ?

ಆ) ಖಾಸಗಿ ಕ್ಷೇತ್ರಕ್ಕೂ ಸಹಕಾರ ಕ್ಷೇತ್ರಕ್ಕೂ ಇರುವ ವ್ಯತ್ಯಾಸವೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ಪಶುಸಂಗೋಪನಾ ಮತ್ತು ಪಶು ವೈದ್ಯ ಸಚಿವರು) :

ಆ) ಬಂದಿಲ್ಲ

ಆ) ಸಹಕಾರಿ ಕ್ಷೇತ್ರವು "ಎಲ್ಲರೂ ಒಬ್ಬರು ಮತ್ತು ಒಬ್ಬರಿಗೆ ಎಲ್ಲರೂ" ಎಂಬ ತತ್ವದ ಮೇಲೆ ಕಾರ್ಯ ನಿರ್ವಹಿಸಿ ಭಾಗವಹಿಸುವ ಎಲ್ಲಾ ಸದಸ್ಯರಿಗೂ ಸಮಾನ ಅವಕಾಶ ಸೌಲಭ್ಯ ಸವಲತ್ತುಗಳನ್ನು ನೀಡುತ್ತದೆ. ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಆದರೆ ಖಾಸಗಿ ಕ್ಷೇತ್ರವೂ ಒಬ್ಬರ ಅಥವಾ ಒಂದು ನಿಗದಿತ ಸಂಖ್ಯೆಯ ಮಾಲೀಕತ್ವಕ್ಕೆ ಸೀಮಿತವಾಗಿದ್ದಾಗಿದ್ದು ಸಾಮಾಜಿಕ ಹೊಣೆಗಾರಿಕೆ ಇಲ್ಲದೇ ಇರುವುದರ ಜೊತೆಗೆ ಕಡಿಮೆ ಭಾಗವಹಿಸುವಿಕೆ ಅಥವಾ ಸೌಲಭ್ಯ ಮತ್ತು ಸವಲತ್ತುಗಳನ್ನು ಹಂಚಿಕೊಳ್ಳುವುದು ಇರುವುದಿಲ್ಲ.

ಕುಂದಾಪುರ ತಾಲ್ಲೂಕು ಲೋಕೋಪಯೋಗಿ ರಸ್ತೆಗಳ ಕುರಿತು

2626 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕುಂದಾಪುರ ತಾಲ್ಲೂಕಿನಲ್ಲಿ ಇರುವ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೊಳಪಟ್ಟ ರಸ್ತೆಗಳಾವುವು? (ರಸ್ತೆಯ ಉದ್ದ ಮತ್ತು ಹೆಸರು ನೀಡುವುದು)

ಆ) ಇವುಗಳಲ್ಲಿ ಡಾಂಬರೀಕರಣ ಮಾಡಿರುವ ಲೋಕೋಪಯೋಗಿ ಇಲಾಖೆ ರಸ್ತೆಗಳಾವುವು?